545 CS (MAIN) EXAM, 2010

A-DTN-K-JM-7

# KANNADA

## (Compulsory)

*Time Allowed : Three Hours* | *Maximum Marks : 300*

---

***INSTRUCTIONS***

***Candidates should attempt all questions.***

***The number of marks carried by each question is indicated at the end of the question.***

***Answers must be written in Kannada, unless otherwise directed.***

***In the case of Question No. 3, marks will be deducted if the précis is much longer or shorter than the prescribed length.***

---

1. ಕೆಳಗಿನ ಯಾವುದಾದರೂ ಒಂದು ವಿಷಯದ ಬಗೆಗೆ ಸುಮಾರು 300 ಶಬ್ದಗಳಲ್ಲಿ ಒಂದು ಪ್ರಬಂಧವನ್ನು ಬರೆಯಿರಿ : *100*

   (a) ಗೌರವಯುತ ಕೊಲೆಗಳನ್ನು ಕಾನೂನು ತಡೆಯ ಬಲ್ಲುದೆ ?

   (b) ಆಹಾರ ಕಲಬೆರಕೆಯು ವಿಪತ್ತಿನ ಸೂಚನೆ.

   (c) ಮೂಢನಂಬಿಕೆ ವಿರುದ್ಧ ವೈಚಾರಿಕತೆ.

   (d) ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆ.

   (e) ಮಾಹಿತಿ ಹಕ್ಕು ಕಾಯದೆ ಪರಿಶುದ್ಧ ಮತ್ತು ನ್ಯಾಯಯುತವಾದ ಆಡಳಿತವನ್ನು ತರಬಲ್ಲುದೆ ?

2. ಕೆಳಗಿನ ವಾಕ್ಯಗಳನ್ನು ಓದಿ ಕೊನೆಯಲ್ಲಿರುವ ಪ್ರಶ್ನೆಗಳಿಗೆ ನಿಮ್ಮ ಮಾತುಗಳಲ್ಲಿ ಉತ್ತರಿಸಿರಿ. ಉತ್ತರಗಳು ನೇರ, ಸ್ಪಷ್ಟ, ಸಂಕ್ಷಿಪ್ತವಾಗಿರಬೇಕು : *10×6=60*

ಸೌರಶಕ್ತಿಯು ಎಲ್ಲ ನವೀಕರಣ ಶಕ್ತಿಗಳಡಿ ಬರುವ ಒಂದು ಭಾಗವಾಗಿದೆ. ಇದು ಗತಕಾಲದ ಇಂಧನಗಳ ಮೇಲಿನ ನಮ್ಮ ಅವಲಂಬನವನ್ನು ಕಡಿಮೆ ಮಾಡುವ ಏಕಮಾತ್ರ ಮಾರ್ಗವಾಗಿದೆ. ಮುಂದೊಂದು ಕಾಲದಲ್ಲಿ ಇದನ್ನು ಪಡೆಯಲು ಹೆಚ್ಚು ಹಣವನ್ನು ವ್ಯಯಿಸಬೇಕಾಗುವುದು ಮತ್ತು ಇದರ ಕೊರತೆಯು ತಲೆದೋರುವುದು. ಸೌರಶಕ್ತಿಯ ಬಳಕೆಯು ನಮ್ಮ ಗ್ರಹದ ಪರಿಸರದಲ್ಲಿ ಸಮತೋಲನವನ್ನು ಕಾಪಾಡುವಲ್ಲಿ ಕೀಲಿಕೈಯಾಗಿದೆ ಮತ್ತು ಹಸಿರು ಸಸ್ಯರಾಶಿಯನ್ನು ತೆಗೆದು ಮನೆ ನಿರ್ಮಿಸುವುದನ್ನು ತಗ್ಗಿಸುವುದು. ಇಂಥ ಒಳ್ಳೆಯ ಗುಣಗಳನ್ನು ಸೌರಶಕ್ತಿಯು ಒಳಗೊಂಡಿದ್ದರೂ ಇದರ ಬಳಕೆಯು ವ್ಯಾಪಕವಾಗಿ ಇದುವರೆಗೆ ಅಷ್ಟಾಗಿ ಆಗುತ್ತಿಲ್ಲ ಮತ್ತು ಇದನ್ನು ಗತಕಾಲದ ಇಂಧನದ ಪರ್ಯಾಯವೆಂದು ಜನ ಒಪ್ಪಿಕೊಂಡಿಲ್ಲ. ಏಕೆಂದರೆ ಇದು ಇನ್ನುಳಿದ ಇಂಧನಗಳಿಗಿಂತ ದುಬಾರಿಯಾದುದೂ, ತಂತ್ರಜ್ಞಾನ ಸಂಬಂಧಿಯಾದುದೂ ಆಗಿದೆ. ಏನೇ ಆಗಲಿ ಪ್ರತಿ ವರ್ಷ ತಂತ್ರಜ್ಞಾನ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಗಳು, ಸುಧಾರಣೆಗಳು ಆಗುತ್ತಿವೆ. ಯಾವುದೇ ವಸ್ತುವಿನ ಬೆಲೆ ಇತ್ತೀಚೆ ಕಡಿಮೆಯಾಗುತ್ತಲಿದೆ ಮತ್ತು ಹೀಗಾಗುತ್ತಲಿರುವುದು ನಿಶ್ಚಿತ. ಸೌರಶಕ್ತಿಯ ಬಳಕೆ ಸಾವಕಾಶವಾಗಿ ನಡೆದರೂ ಇದು

ಸಮರ್ಥವಾದ ಪೂರ್ವಕಾಲದ ಇಂಧನಗಳಿಗೆ ಪರ್ಯಾಯವಾಗಿದೆ. ಸರಕಾರವು ಸ್ಥಾಪಿಸಿದ ಜವಾಹರಲಾಲ ನೆಹರೂ ರಾಷ್ಟ್ರೀಯ ಸೌರ ಪ್ರಚಾರ ಸಂಸ್ಥೆಯು ಶಕ್ತಿಯ ಪರಿಶುದ್ಧ ಮೂಲಗಳನ್ನು ಸಂರಕ್ಷಣೆಮಾಡುವ ದಿಸೆಯಲ್ಲಿ ಇಟ್ಟ ಕನಸಿನ ಹೆಜ್ಜೆಯಾಗಿದೆ.

ಸೌರಶಕ್ತಿ ಕ್ಷೇತ್ರವು ಉದ್ಯೋಗಗಳನ್ನು ಸೃಷ್ಟಿಸುವಲ್ಲಿ ಭರವಸೆಯನ್ನು ಹುಟ್ಟಿಸುವಂಥದಾಗಿದೆ. ಈ ಕ್ಷೇತ್ರವು ಹೆಚ್ಚಿನ ಸಂಶೋಧನಾತ್ಮಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡುದುದರಿಂದ ನಾವೀನ್ಯತೆಯನ್ನು ಸಾಧಿಸಿದೆ ಮತ್ತು ಉನ್ನತ ಪದವಿಯ ಅಂದರೆ ಹೆಚ್ಚಿನ ಕೌಶಲ್ಯ ಹಾಗೂ ಗುಣಮಟ್ಟವನ್ನು ಕಾಪಾಡಿಕೊಳ್ಳುವ ಉದ್ಯೋಗಗಳನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಗಿದೆ.

ಈಗಾಗಲೇ ಭಾರತವು ಸೌರಶಕ್ತಿಯ ಉತ್ಪಾದನೆಯಲ್ಲಿ ಜಗತ್ತಿನಲ್ಲಿಯೇ ಆರನೇ ಸ್ಥಾನ ಪಡೆದಿದ್ದರೂ, ಇನ್ನೂ ಇದರ ಬಗ್ಗೆ ಅಪರಿಮಿತವಾದ ಬಿಕ್ಕಟ್ಟು ಇದೆ. ಸೌರ ಪಿ.ವಿ. ಈ ಬಿಕ್ಕಟ್ಟನ್ನು ತಗ್ಗಿಸಬಹುದು. ಇದು ಸಂಪೂರ್ಣ ಪರಿಸರ ವ್ಯವಸ್ಥೆಯಿಂದ ರೂಪುಗೊಂಡುದಾಗಿದೆ. ಸೌರಕ್ಷೇತ್ರದ ಸಲಕರಣೆಗಳನ್ನು ಈಡೇರಿಸುವಂಥದಾಗಿದೆ. ಇವೊತ್ತಿನ ಬಹುತೇಕ ಸೌರಕ್ಷೇತ್ರದ ಸ್ಥಿತಿಗತಿಗಳು ಅದನ್ನು ಸ್ಥಾಪಿಸುವಲ್ಲಿ ಮತ್ತು ತಾಂತ್ರಿಕ ವ್ಯವಸ್ಥೆಯ ನಕ್ಷೆಯನ್ನು ಸಿದ್ಧಪಡಿಸುವಲ್ಲಿ ನಿರತವಾಗಿವೆ. ಈ ಕ್ಷೇತ್ರದಲ್ಲಿ ಕಾರ್ಖಾನೆಗಳು ಬೆಳೆಯಬೇಕಾದುದು ಅಗತ್ಯವಾಗಿದೆ. ಸೌರಶಕ್ತಿಯ

ಸಾಮರ್ಥ್ಯದಲ್ಲಿ ಸುಧಾರಣೆಯಾದಲ್ಲಿ ಆದರಿಂದ ಉತ್ಪಾದನೆಗೊಳ್ಳುವ ವಸ್ತುಗಳ ಬೆಲೆ ತಗ್ಗುವುದು ಮತ್ತು ಇನ್ನುಳಿದವುಗಳ ಬೆಲೆಯಲ್ಲಿ ಸಮತೋಲನ ಉಂಟಾಗುವುದು.

ಪ್ರಶ್ನೆಗಳು :

(a) ಗತಕಾಲದ ಇಂಧನಗಳ ಮೇಲೆ ಅವಲಂಬನೆಯಾಗುವುದನ್ನು ನಾವು ಏಕೆ ಕಡಿಮೆ ಮಾಡಬೇಕು ?

(b) ಸೌರಶಕ್ತಿಯನ್ನು ಬಳಸುವುದರಿಂದ ಆಗುವ ಅನುಕೂಲತೆ ಏನು ?

(c) ಸೌರಶಕ್ತಿಯನ್ನು ಬಳಸುವ ಪದ್ಧತಿಯನ್ನು ಇದುವರೆಗೆ ಏಕೆ ಜನಪ್ರಿಯಗೊಳಿಸಲಿಲ್ಲ ?

(d) ಸೌರಶಕ್ತಿಯು ಸಾಮಾನ್ಯ ಜನರಿಗೂ ಸುಲಭವಾಗಿ ತಲುಪುವಂತೆ ಏನು ಮಾಡಲಾಗಿದೆ ?

(e) ಸೌರಕ್ಷೇತ್ರವು ನಮ್ಮ ಯುವ ಜನತೆಗೆ ಶ್ರೇಷ್ಠಮಟ್ಟದ ಕೌಶಲ್ಯಪೂರ್ಣ ಉದ್ಯೋಗಗಳು ಲಭ್ಯವಾಗುವಂತೆ ಮಾಡಿದ್ದು ಹೇಗೆ ?

(f) ಸೌರಶಕ್ತಿಯನ್ನು ಕಡಿಮೆ ವೆಚ್ಚದಲ್ಲಿ ಹೇಗೆ ಉತ್ಪಾದಿಸಲಾಗುವುದು ?

3. ಕೆಳಗಿನ ವಾಕ್ಯವೃಂದವನ್ನು ಅದರ ಮೂರನೇ ಒಂದು ಭಾಗಕ್ಕೆ ಮೀರದಂತೆ ಸಂಗ್ರಹಿಸಿ ಬರೆಯಿರಿ. ಇದಕ್ಕೆ ಶೀರ್ಷಿಕೆಯನ್ನು ಕೊಡುವುದು ಅನಿವಾರ್ಯವಲ್ಲ. ಪದಗಳ ಮಿತಿಗಿಂತ ತುಂಬ ಚಿಕ್ಕದಾಗಿದ್ದರೆ ಅಥವಾ ತುಂಬ ದೀರ್ಘವಾಗಿದ್ದರೆ ಅಂಕಗಳನ್ನು ಕಳೆಯಲಾಗುವುದು. ಸಂಗ್ರಹಲೇಖನವನ್ನು ಅದಕ್ಕಾಗಿಯೇ ನೀಡಲಾದ ಪ್ರತ್ಯೇಕ ಹಾಳೆಯಲ್ಲಿ ಬರೆಯಬೇಕು, ಅನಂತರ ಅದನ್ನು ಉತ್ತರ ಪತ್ರಿಕೆಗೆ ಭದ್ರವಾಗಿ ಕಟ್ಟಬೇಕು. *60*

ಕಲೆಯು ಒಂದುವೇಳೆ ಪ್ರತಿಯೊಬ್ಬರಿಗೂ ಆಯಾ ವಯಸ್ಸಿನಲ್ಲಿ ಅಭಿವ್ಯಕ್ತಿಯನ್ನು ನೀಡಬಲ್ಲುದಾಗಿದ್ದರೆ, ಅದು ನಿಶ್ಚಿತವಾಗಿಯೂ ಯಾವುದೇ ಇತಿ-ಮಿತಿಗಳು, ಹಳೆಯ ಕಾಲ್ಪನಿಕ ಮತ್ತು ಯಾವುದೇ ಮಾನಸಿಕ ಸ್ಥಿತಿಯನ್ನು ಹೊಂದಿದವರಿಗೂ ಸ್ಫೂರ್ತಿಯನ್ನು ನೀಡುವಂಥದಾಗಿರುತ್ತದೆ. ಜೀವನ ನಿರಂತರ ಪ್ರವಹಿಸುವ ಪ್ರವಾಹವಿದ್ದಂತೆ. ಕ್ರಾಂತಿಕಾರಕವಾದ ಬದಲಾವಣೆಗಳು ಹಾಗೂ ಮಹತ್ವದ ಕಾರ್ಯಗಳು ತೀವ್ರವಾಗಿ ನಡೆಯುವುದರಿಂದ ಅದರ ಗತಿಯು ಕ್ರಿಯಾಶೀಲಗೊಳ್ಳುವುದು ಅಂಥ ವೇಳೆಯಲ್ಲಿ ಆ ಕಾಲದ ಸಾಮಾಜಿಕ ಅಗತ್ಯತೆ, ಆಧುನಿಕ ಒಲವುಗಳು ಒತ್ತಾಸೆಯಾಗಿ ನಿಂತುಕೊಂಡು ಸಾಂಸ್ಕೃತಿಕ ಬದಲಾವಣೆಯನ್ನು ತರುವವು. ಹಳೆಯ ಬೇರುಗಳನ್ನು ಕಳೆದು ಕೊಳ್ಳುವುದರ ಕಾರಣದಿಂದಾಗಿ ಹಳೆಯ ಪದ್ಧತಿ ಮತ್ತು ಹೊಸಕಾಲದಲ್ಲಿನ ಹೋರಾಟಗಳೊಂದಿಗೆ ಸಂಘರ್ಷ ಹುಟ್ಟಿಕೊಳ್ಳುವುದು. ಹಳೆಯ ಸಂಸ್ಕೃತಿಯನ್ನು ಆಚರಣೆಯಲ್ಲಿ ತಂದ ಸಂಪ್ರದಾಯವಾದಿಗಳು ಹೊಸ ಬದಲಾವಣೆಗಳನ್ನು ಆಚರಣೆಯಲ್ಲಿ ತರಲು ಹೆದರಿ ತಮ್ಮದೇ ಆದ ಸಂಸ್ಕೃತಿಯನ್ನು ಉಳಿಸಲು ಅದನ್ನು ಮೊದಲಿದ್ದಂತೆಯೇ ಕಾಪಾಡಲು

ಯತ್ನಿಸುವರು. ಅವರು ತಮ್ಮಷ್ಟಕ್ಕೆ ತಾವೇ ನಾಗರಿಕತೆಗೆ ಮತ್ತು ನೈತಿಕತೆಗೆ ಪಾಲಕರು ಎಂದು ಸ್ವತಃ ಘೋಷಿಸುವರು. ಹಳೆಯ ಪದ್ಧತಿ, ಆಚರಣೆ ಹಾಗೂ ನೀತಿ ನಿಯಮಗಳೇ ಶ್ರೇಷ್ಠವೆಂದು ಭಾವಿಸಿ ಅವುಗಳ ಪರವಾಗಿ ನಿಂತುಕೊಂಡು ವಾದಿಸುವರು. ಪ್ರತಿಯೊಂದು ಕ್ಷೇತ್ರದಲ್ಲಿನ ಸಾಮಾಜಿಕ ಬದಲಾವಣೆ ಯಾವುದೇ ಒಂದು ಸಮಾಜದಲ್ಲಿ ಸಂಸ್ಕೃತಿಯಾಗಿ ರೂಪುಪಡೆಯುವಲ್ಲಿ ಪಾತ್ರ ವಹಿಸುವುದು. ಅದು ತನ್ನ ಸ್ವಂತ ಬೇಡಿಕೆಗಳನ್ನು ಅಭಿವ್ಯಕ್ತ ಪಡಿಸುತ್ತದೆ. ಅದರಲ್ಲಿ ಆಧುನಿಕ ಕಾಲದ ಹೊಸ ವಿಚಾರಗಳು ಅಥವಾ ತಾಂತ್ರಿಕತೆ ಅಥವಾ ಹೊಸ ವಿಚಾರಗಳನ್ನು ಪ್ರತಿಬಿಂಬಿಸುವ ಹೊಸ ಕಾಲಕ್ಕೆ ಉಪಯೋಗವಾಗುವ ನೂತನ ತಾಂತ್ರಿಕತೆ ಹಾಗೂ ಆಧುನಿಕವಾದ ಆದರ್ಶಗಳನ್ನು ಕುರಿತಾದ ವಿಷಯಗಳನ್ನು ಹೊಂದಿರುವುದಿಲ್ಲ. ಈ ರೀತಿಯ ಸಂಘರ್ಷಮಯ ಸ್ಥಿತಿಯಲ್ಲಿ ಹಳೆಯ ಸಂಸ್ಕೃತಿಯನ್ನು ಅವಲಂಬಿಸಿದವರು ಅಸಂಸ್ಕೃತರಂತೆ ಮತ್ತು ಅವೈಜ್ಞಾನಿಕ ಪದ್ಧತಿಗಳ ದಾಸರಂತೆ ನಡೆದುಕೊಳ್ಳುವರು. ಇಂಥವರು ಮುಂದೊಮ್ಮೆ ತಮ್ಮಷ್ಟಕ್ಕೆ ತಾವೇ ನಗಣ್ಯರಾಗಿ ಹೋಗುವರು ಮತ್ತು ಸಮಾಜದಿಂದಲೂ ತಿರಸ್ಕರಿಸಲ್ಪಡುವರು. ಪ್ರಗತಿಪರವಾಗಬಹುದಾದ ಶಕ್ತಿಯೊಂದನ್ನು ಅದುಮಿಟ್ಟರೆ ಅದು ಮುಂದೆ ನವೀಕರಣಗೊಂಡು ಮತ್ತೊಂದು ರೂಪದಲ್ಲಿ ಕಾಣಿಸಿಕೊಳ್ಳುವುದು. ಇದು ಹೊಸ ಸಮಾಜ. ಯಾರೊಬ್ಬ ಕಲಾವಿದನಿಗೂ, ಆತನು ಏಕಾಂಗನಾಗಿ ಪ್ರತಿಯೊಂದು ಕ್ಷೇತ್ರಗಳಲ್ಲಿ ಸಂಸ್ಕೃತಿ ಮತ್ತು ವಿಜ್ಞಾನವನ್ನು ಸಂಪೂರ್ಣವಾಗಿ ಅಭಿವೃದ್ಧಿ ಪಡಿಸುವ ಅವಕಾಶವಿರುತ್ತದೆ.

ಇಂದು ಜೀವನದ ಸಮನ್ವಯ ಸಿದ್ಧಾಂತವು ಅವ್ಯವಸ್ಥಿತವಾದ ಸಮಾಜದಿಂದ ಮುರಿದು ಬಿದ್ದಿದೆ. ಆದರ ಪ್ರತಿಯೊಂದು ಶಾಖೆಗಳಲ್ಲಿನ ಕಾರ್ಯ-ಕಲಾಪಗಳು ಒಂದರಿಂದ ಮತ್ತೊಂದು ಪ್ರತ್ಯೇಕಗೊಂಡಿವೆ. ತತ್ವಜ್ಞಾನಿಯು ವಿಜ್ಞಾನಿಯಿಂದ ಬೇರ್ಪಟ್ಟಿದ್ದಾನೆ. ಕಲಾವಿದನಿಂದ ಅಭಿಯಂತನು ಮತ್ತು ಪ್ರತಿಯೊಬ್ಬರೂ ಪರಸ್ಪರ ಪ್ರತ್ಯೇಕ ಪ್ರತ್ಯೇಕವಾಗಿ, ಸದೃಢರಾಗಿ ವೈಯಕ್ತಿಕ ಅಭಿವೃದ್ಧಿಯನ್ನೇನೋ ಹೊಂದಿ ಬದುಕುತ್ತಿದ್ದಾರೆ. ಪ್ರತಿಯೊಬ್ಬರೂ ತಂತಮ್ಮ ವ್ಯಕ್ತಿಗತವಾದ ನೆಲೆಯಲ್ಲಿ ಜೀವಿಸಲು ಅಗತ್ಯವಾದುದನ್ನು ಸಂಪಾದಿಸಿಕೊಂಡಿದ್ದಾರೆ. ಸದ್ಯ ಪ್ರತಿಯೊಬ್ಬನೂ ಸಮತೋಲನ ಮತ್ತು ಸೌಂದರ್ಯ ಮತ್ತು ಪೂರ್ಣತ್ವದ ರೇಖೆಯನ್ನು ಹೊಂದಿಸುವ ಶಕ್ತಿ ಹೊಂದಿದ್ದಾರೆ. ಉದಾಹರಣೆಗೆ, ಈ ಕಾಲದಲ್ಲಿ ಯಾಂತ್ರಿಕವಾದ ಯಂತ್ರವು ಜಟಿಲವಾದ ಜಾಮೆಟ್ರಿ ಪದ್ಧತಿಯಲ್ಲಿನ ಲೆಕ್ಕಗಳನ್ನು ಸರಳಗೊಳಿಸುವುದು, ವಿಷಮಯ ಗಾಳಿಯನ್ನು ಮತ್ತು ಹೊಗೆಯನ್ನು ಪರಿಶುದ್ಧ ಗೊಳಿಸಿ ಸಹ್ಯಗೊಳಿಸುವುದು. ಭೂಮ್ಯಾಕಾಶಗಳ ಮಧ್ಯದಲ್ಲಿ ಸಾಮಾನ್ಯ ಜನರ ಬದುಕು ಸಹ್ಯವಾಗುವಂತೆ ಪರಿಸರವನ್ನು ನಿರ್ಮಲಗೊಳಿಸುವ ಶಕ್ತಿ ಇಂದು ಯಂತ್ರಗಳಿಗೆ ಇದೆ. ಇಂಥ ವಿಷಯಗಳನ್ನು ಒಳಗೊಂಡ ನಾಯಕರಾಗಿ ವಿಹರಿಸುವ ಕಾಲ್ಪನಿಕ ಹಾಗೂ ಐತಿಹಾಸಿಕ ಮತ್ತು ಪುರಾಣಕಥೆಗಳು ನಮ್ಮ ಪ್ರಾಚೀನ ಸಾಹಿತ್ಯದಲ್ಲಿನ ಅನೇಕ ಕಥೆಗಳಲ್ಲಿ ವ್ಯಕ್ತಗೊಂಡಿವೆ. ಯಂತ್ರಗಳು ಇಂದು ಮಾನವನ ಕಾರ್ಯವ್ಯಾಪ್ತಿಯನ್ನು ವಿಸ್ತೃತಗೊಳಿಸಿದ ಕೈಕಾಲುಗಳಂತಿವೆ. ಮನುಷ್ಯ ನಿಸರ್ಗದ ಮೇಲೆ ತನ್ನ ವರ್ಚಸ್ಸನ್ನು, ಒಡೆತನವನ್ನು ಸ್ಥಾಪಿಸಿದ್ದಾನೆಂದು ಆತನ ಶಕ್ತಿ ಸಾಧನೆಯನ್ನು, ವಿಜಯವನ್ನು ಯಂತ್ರಗಳು ವರ್ಣಿಸುತ್ತವೆ.

ಒಂದು ವೇಳೆ ಮಾನವನು ತನ್ನ ಅಶಕ್ತತೆಯಿಂದ ಯಂತ್ರಗಳಿಗೆ ಒಡೆತನವನ್ನು ಕೊಟ್ಟಿದ್ದೇ ಆದರೆ ಅವು ಆತನ ಮೇಲೆ

ಒಡೆತನವನ್ನು ಸಾಧಿಸುವವು. ಆದ್ದರಿಂದ ಇದು ಯಂತ್ರದ ತಪ್ಪಲ್ಲ. ಯಂತ್ರಗಳನ್ನು ಸ್ವತಃ ಮಾನವನೇ ಸೃಷ್ಟಿಮಾಡಿದ್ದಾನೆ ಮತ್ತು ಅವು ಆತನಿಂದಲೇ ನಾಶವೂ ಆಗುವವು. ಯಂತ್ರಗಳು ಕ್ರಮೇಣ ಮನುಷ್ಯನ ಮೇಲೆ ವಿಜನ ಸಾಧಿಸುವವು ಮತ್ತು ಆತನನ್ನು ಬಲಿ ತೆಗೆದುಕೊಳ್ಳಲೂ ಬಹುದು. ರೇಡಿಯೋ ಕೇವಲ ಮಾನವನ ಪುಪ್ಪಸಗಳಿಂದ ಹೊರಡುವ ಧ್ವನಿಗಳನ್ನು ಹಿಡಿದಿಟ್ಟು ಪ್ರಸಾರಗೊಳಿಸುವ ಮತ್ತು ಆತನ ಕಿವಿಯ ಟೆಲಿಫೋನ್ ಆಗಿದೆ. ವಿಮಾನವನ್ನು ಏರಿ ಪ್ರಯಾಣಿಸುವ ಅನುಭವವನ್ನು ಮತ್ತು ಗ್ರಾಮೀಣ ಪ್ರದೇಶದಲ್ಲಿ ಕಿರುಗುಟ್ಟುತ್ತ ಸಾಗುವ ಚಕ್ಕಡಿಯ ಧ್ವನಿಯನ್ನು ನಾವಿಂದು ಕಾವ್ಯಾತ್ಮಕವಾದ ನ್ಯಾಯ ಒದಗಿಸಿಲ್ಲ. ಇದು ಕೇವಲ ಸಾಂಪ್ರದಾಯಿಕ ಎನ್ನಿಸಿದೆ. ಯುಗದ ಆವಿಷ್ಕಾರದ ಪ್ರತೀಕವಾಗಿ ಇಂದು ಮಾನವನು ಟ್ರ್ಯಾಕ್ಟರನ್ನು ಸೃಷ್ಟಿಮಾಡಿದ್ದಾನೆ. ಹೊಸ ಹೊಸ ಉಪಕರಣಗಳನ್ನು ಸೃಷ್ಟಿಸುತ್ತ ನಡೆದ ಮನಷ್ಯನ ಅಕ್ಷಯ ರೂಪದ ಪ್ರತಿಭೆಯನ್ನು ಉಪೇಕ್ಷೆಯಿಂದ ಕಾಣುವುದು ಸಾಮಾಜಿಕ ಪರಿವರ್ತನೆಯ ನಿಯಮಗಳನ್ನು ಉಪೇಕ್ಷೆ ಮಾಡಿದಂತಾಗುವುದು. ಮತ್ತು ಯಾವುದೇ ಶ್ರೇಷ್ಠ ಕಲಾಕಾರನು ಜೈವಿಕ ನೈಸರ್ಗಿಕ ಶಕ್ತಿಗಳನ್ನು ಉಪೇಕ್ಷೆ ಮಾಡಲಾರನು. ಒಬ್ಬ ಕಲಾಕಾರನು ಜೈವಿಕ ನೈಸರ್ಗಿಕ ಉತ್ಪನ್ನಗಳಂತೆ ಪ್ರಯೋಜನಕಾರಿಯಾಗಿರುತ್ತಾನೆ. ಶ್ರೇಷ್ಠ ಮ್ಯಾಕ್ಸಿಕನ್ ಕಲಾವಿದ ರಿವೆರಾಡಿಯಾಗೋ ಹೀಗೆ ಹೇಳುತ್ತಾನೆಃ 'ಗಿಡವು ಹೂವು ಮತ್ತು ಹಣ್ಣುಗಳನ್ನು ನೀಡುವುದರ ಮೂಲಕ ತನ್ನೆಲ್ಲ ಶಕ್ತಿಯನ್ನು ಕಳೆದು ಕೊಳ್ಳುವೆ ನೆಂದು ಅದು ಪ್ರತಿವರ್ಷ ದುಃಖಿಸದು. ಮತ್ತೆ ಅದು ಮುಂದಿನ ಋತುವಿನಲ್ಲಿ ಎಲೆಗಳನ್ನು ನೀಡುವುದು.' ಕಲೆ ಎಂದರೆ ಕೇವಲ ಚಿತ್ರಗಳನ್ನು ಬಿಡಿಸುವುದಲ್ಲ. ಅದು ಏನು ಇಲ್ಲವೋ ಅದನ್ನು ಅಭಿವ್ಯಕ್ತಪಡಿಸುವುದರ ಜೊತೆಗೆ ಅದು ಹೇಗಿರಬೇಕೆಂಬುದನ್ನೂ ಅಭಿವ್ಯಕ್ತ ಪಡಿಸುತ್ತದೆ. ನಿರಾಶೆಗೊಳಿಸುವ, ಸೋಲಿನ ಭಾವನೆಗಳನ್ನು ಕಲೆಯು ಬಿಂಬಿಸದೆ ಸದಾ ಆಶಾವಾದವನ್ನು ಬಿಂಬಿಸುವಂಥವಾಗಿದೆ.

4. ಈ ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಅನುವಾದಿಸಿರಿ : *20*

The world does not need extraordinarily talented people. It does not need highly skilled people either. It has plenty of super-intelligent people. We need ordinary people with extraordinary motivation. M.K. Gandhi was an ordinary man with amazing motivation to establish truth and justice. The Wright brothers were ordinary people with a dream of flying.

You can also achieve exceptional results if you are inspired with a higher ideal. Replacing 'inspiration' with 'information' has led to knowledge being viewed as drudgery rather than as pleasure. Education has degenerated to data being transmitted from the teacher to the taught without igniting the minds of the young with a higher purpose.

How many of us wake up inspired, looking forward to a day of service ? Who among us finds exhilaration in contributing to society ? Life changes magically from boredom to excitement when you are inspired to serve. You redefine norms and achieve the impossible, paving the way to outstanding success. You find happiness at work, not in escaping from it. Most importantly, you evolve spiritually and attain Godhood.

Inspiration gives ordinary people the courage and hope to make life better for themselves and for posterity. Find inspiration and life will transform into an exciting adventure of self-discovery.

5. ಈ ಕೆಳಗಿನ ಗದ್ಯಭಾಗವನ್ನು ಇಂಗ್ಲೀಷಿಗೆ ಅನುವಾದಿಸಿರಿ : 20

ಇಂದು ವಿಜ್ಞಾನದ ಸಾಮಾಜಿಕ ಜವಾಬ್ದಾರಿಗಳನ್ನು ಕುರಿತು ನಾನು ಮಾತಾಡುವುದು ಯುವಕರಿಗೆ ಸರಳವಾಗಿ ತಿಳಿಯುವುದು. ಆದರೆ ಈ ವಿಷಯವನ್ನು ತಿಳಿದುಕೊಳ್ಳಲು ಮುದುಕರಿಗೆ ಕಠಿಣವಾಗುವುದು. ಏಕೆಂದರೆ ಯುವಕರು ಇಂಥ ವಿಷಯಗಳನ್ನು ಗ್ರಹಿಸುವಲ್ಲಿ ಗುಣ ಸಂಪನ್ನ ರಾಗಿರುತ್ತಾರೆ. ಕಾಲ ಕಳೆದಂತೆ ಮಾನವನಿಗೆ ವಯಸ್ಸಾದಂತೆ ಜ್ಞಾನವನ್ನು ಗ್ರಹಣಮಾಡಿಕೊಳ್ಳುವ ಶಕ್ತಿ ಕಡಿಮೆಯಾಗುವುದು ಇದುವೇ ಕಲ್ಪನಾ ಶಕ್ತಿಯ ಗುಣವಾಗಿದೆ. ಕಲ್ಪನಾಶೀಲತೆಯು ವಿಜ್ಞಾನ ಕ್ಷೇತ್ರದ ಅವಿಭಾಜ್ಯ ಅಂಗವಾಗಿರುವ ವಿಶಿಷ್ಟಗುಣವನ್ನು ಒಳಗೊಂಡಿದೆ ಮತ್ತು ಯುವಕರು ನೈಸರ್ಗಿಕವಾಗಿ ಇಂಥ ಗುಣವನ್ನು ಪಡೆದಿರುತ್ತಾರೆ. ದುಃಖದ ಮಾತು ಏನೆಂದರೆ ಮಾನವನಿಗೆ ವಯಸ್ಸಾಗುತ್ತ ಬಂದಂತೆ ಆತನಲ್ಲಿ ಈ ಗುಣವು ಕಡಿಮೆಯಾಗುತ್ತ ಬರುವುದು. ಈ ಗುಣವು ಇಂದಿನ ಅನೇಕ ದುಃಖದ, ಅಸೌಖ್ಯದ ವಿಷಯಗಳನ್ನು ದೂರ ಮಾಡುವಲ್ಲಿ ಸಹಕಾರಿಯೆನ್ನಿಸಿದೆ.

ಕಳೆದ ಮೂರು ಶತಮಾನಗಳಿಂದ ವಿಜ್ಞಾನದ ಸಂಶೋಧನೆಗಳು ಸಮಾಜದ ಮೇಲೆ ಗಮನಾರ್ಹವಾದ ಪ್ರಭಾವವನ್ನು ಬೀರುತ್ತ ಬಂದಿವೆ. ಆದರೂ ಜನತೆ ಒಟ್ಟಾರೆಯಾಗಿ ಜಗತ್ತಿನ ಮೇಲೆ ವಿಜ್ಞಾನದ ಪ್ರಭಾವವು ಹೇಗಾಗಿದೆಯೆಂಬುದನ್ನು ಅರ್ಥೈಸಿಕೊಂಡಿಲ್ಲವೋ ಅಥವಾ ಇದರ ಬಗ್ಗೆ ಕಾಳಜಿ ವಹಿಸಿಲ್ಲವೋ ತಿಳಿಯದು. ನ್ಯೂಟನ್ನನ ಕಾಲದಿಂದ ಮಾನವನು ವಿಜ್ಞಾನದ ತಳಹದಿಯ ಮೇಲೆ ಶೋಧಗೊಂಡ ಅನೇಕ ತಾಂತ್ರಿಕ ಹಾಗೂ ವೈಜ್ಞಾನಿಕ ಕೊಡುಗೆಗಳ, ಸೌಲಭ್ಯಗಳ ಪ್ರಯೋಜನವನ್ನು ಪಡೆಯುತ್ತ ಬಂದಿದ್ದಾನೆ. ಆತನಿಗೆ

ವೈಜ್ಞಾನಿಕ ಕೊಡುಗೆಗಳ ಮಹತ್ವದ ಅರಿವಾಗಿದೆ. ವಿಜ್ಞಾನದ ಕೊಡುಗೆಯಾದ ಔಷಧಿಯಿಂದ ಬಹಳ ವರ್ಷಗಳ ವರೆಗೆ ಬದುಕಬಹುದೆಂಬ ತಿಳಿವಳಿಕೆ ಜನರಿಗೆ ಬಂದಿದೆ.

ಲಿಯೋನಾರ್ಡ ಡಾ. ಲಿಂಚಿ ಅವರ ಕಾಲದಿಂದ ಜನರು ವಿಜ್ಞಾನದ ಕೊಡುಗೆಗಳಾದ ಅನೇಕ ಯುದ್ಧೋಪಕರಣಗಳಿಂದ ಯುದ್ಧದಲ್ಲಿ ಜಯವನ್ನು ಸಾಧಿಸಬಹುದೆಂದು ಪ್ರಶಂಸಿಸಿದ್ದಾರೆ. ಕಾಲಕಳೆದಂತೆ ತಂತ್ರಜ್ಞಾನದ ಭೌತಿಕವಾದ ಬೆಳೆದಿದೆ. ಹೊಸ ತಂತ್ರಜ್ಞಾನದ ಬೇಡಿಕೆಯ ಧ್ವನಿ ದಿನೇ ದಿನೇ ತಾರಕಕ್ಕೇರುತ್ತ ಹೆಚ್ಚಾಗುತ್ತ ನಡೆದಿದೆ. ಹೆಚ್ಚಿನ ಸಂಖ್ಯೆಯಲ್ಲಿ ಇಂದು ಜನ ವಿಜ್ಞಾನಿಗಳಾಗಿ, ತಂತ್ರಜ್ಞಾನಿಗಳಾಗಿ ಹೊರಹೊಮ್ಮುತ್ತಿದ್ದಾರೆ.

6. (a) ಕೆಳಗಿನವುಗಳಲ್ಲಿ ಒಂದನ್ನು ಕುರಿತು 200 ಪದಗಳಿಗೆ ಮೀರದಂತೆ ಪತ್ರಿಕಾ ಸಂಪಾದಕರಿಗೆ ಒಂದು ಪತ್ರವನ್ನು ಬರೆಯಿರಿ : *20*

(i) ಶಿಕ್ಷಣ ಪದ್ಧತಿಯಲ್ಲಿ ಸುಧಾರಣೆ

(ii) ಕನ್ನಡಕ್ಕೆ ಸಿಕ್ಕ ಶಾಸ್ತ್ರೀಯ ಭಾಷೆಯ ಸ್ಥಾನಮಾನ

(iii) ಗ್ರಾಮೀಣ ಜನತೆಯ ಆರೋಗ್ಯ

(b) ಕೆಳಗಿನವುಗಳಲ್ಲಿ ಒಂದರ ಅರ್ಥಸ್ವಾರಸ್ಯವನ್ನು ವಿವರಿಸಿರಿ : *10*

(i) ಸಾಲವನ್ನು ಕೊಂಬಾಗ ಹಾಲೋಗರುಂಡಂತೆ

(ii) ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ

(iii) ವೇದ ಸುಳ್ಳಾದರೂ ಗಾದೆ ಸುಳ್ಳಾಗದು

(iv) "ನೀರೊಳಗಿರ್ದುಂ ಬೆಮರ್ತನುರಗ ಪತಾಕಂ"

(c) ಕೆಳಗಿನವುಗಳಲ್ಲಿ ಬಿಟ್ಟಿರುವ ಖಾಲಿ ಜಾಗಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿ : 10

(i) ಓ! ನನ್ನ ಚೇತನ ಆಗು ನೀ ಅನಿಕೇತನ ಎಂದು ಹೇಳಿದವರು ............ .

(ii) ಸಿದ್ಧರಾಮನ ವಚನಗಳ ಅಂಕಿತನಾಮ ....... .

(iii) 'ಭರತೇಶವೈಭವ' ಕಾವ್ಯದ ಕರ್ತೃ ........... .

(iv) ಕನ್ನಡದ ಖ್ಯಾತ ಕವಿಗಳಾದ 'ಅಂಬಿಕಾತನಯದತ್ತ'ರ ಪೂರ್ಣಹೆಸರು ........... .

(v) "ಭಾರತ ಸಿಂಧುರಶ್ಮಿ" ಮಹಾಕಾವ್ಯವನ್ನು ಬರೆದವರು ................. .

(vi) ಸಿದ್ಧಯ್ಯ ಪುರಾಣಿಕ ಅವರ ಕಾವ್ಯನಾಮ ............ .

(vii) ಇದ್ದುದನ್ನು ಇದ್ದಂತೆ ಹೇಳಿದರೆ ಎದ್ದು ಬಂದು ............. .

(viii) 'ಬೆಟ್ಟದ ಮೇಲೊಂದು ಮನೆಯಮಾಡಿ ಖಗಮೃಗಗಳಿಗೆ ಅಂಜಿದಡೆಂತಯ್ಯಾ' ಎಂದು ಹೇಳಿದವರು ............ .

(ix) ಸಂ.ಶಿ. ಭೂಸನೂರಮಠ ಅವರ ಮಹಾಕಾವ್ಯದ ಹೆಸರು ............. .

(x) ಆಕಳು ಕಪ್ಪಾದರೆ ............ .